ಪ್ರಜಾವಾಣಿ

# ಒಲಿಂಪಿಕ್ಸ್‌ಗೆ ಗಗನ್



ಬೆಂಗಳೂರು: ಅಚ್ಚರಿಯ ಬೆಳವಣಿಗೆಯೊಂದರಲ್ಲಿ ಕರ್ನಾಟಕದ ಎ.ಪಿ. ಗಗನ್ ಅವರಿಗೆ ಲಂಡನ್ ಒಲಿಂಪಿಕ್ಸ್‌ನಲ್ಲಿ ಸ್ಪರ್ಧಿಸುವ ಅವಕಾಶ ಲಭಿಸಿದೆ. 1500ಮೀ. ಫ್ರೀ ಸ್ಟೈಲ್‌ನಲ್ಲಿ ಸ್ಪರ್ಧಿಸುವ ಗಗನ್‌ಗೆ ವಿಶ್ವ ಈಜು ಫೆಡರೇಷನ್ (ಫಿನಾ) ಈ ಅವಕಾಶ ನೀಡಿದೆ.

ಆದರೆ, ವೀರಧವಳ್ ಖಾಡೆ, ಸಂದೀಪ್ ಸೆಜ್ವಾಲ್, ಆ್ಯರನ್ ಡಿಸೋಜಾ ಹಾಗೂ ಸೌರಭ್ ಸಾಂಗ್ವೇಕರ್ ಅವರನ್ನು ಫಿನಾ ಪರಿಗಣಿಸಿಲ್ಲ.

'ನನ್ನ ಕನಸು ನನಸಾಗುತ್ತಿದೆ. ಏನು ಹೇಳಬೇಕೆಂಬುದು ಈ ಕ್ಷಣದಲ್ಲಿ ಗೊತ್ತಾಗುತ್ತಿಲ್ಲ' ಎಂದು ಗಗನ್ ಸಂತಸ ಹಂಚಿಕೊಂಡಿದ್ದಾರೆ.